



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسۡمِ اللّٰهِ الرَّحۡمٰنِ الرَّحِيۡمِ

1. ಅಲಿಫ್ ಲಾಮ್ಮೀಮ್.

الٓمّٓ ﴿۱﴾

2-5. ರೋಮನರು ಸಮೀಪದ ಭೂಭಾಗದಲ್ಲಿ ಪರಾಜಿತರಾದರು ಮತ್ತು ತಮ್ಮ ಈ ಪರಾಜಯದ ತರುವಾಯ ಕೆಲವೇ ವರ್ಷಗಳಲ್ಲಿ ಅವರು ವಿಜಯಿಗಳಾಗುವರು.[1] ಹಿಂದೆಯೂ ಇನ್ನು ಮುಂದೆಯೂ ಅಲ್ಲಾಹನದೇ ಪ್ರಭುತ್ವವಿದೆ. ಆ ದಿನವು ಅಲ್ಲಾಹ್ ದಯಪಾಲಿಸಿದ ವಿಜಯಕ್ಕಾಗಿ ಮುಸ್ಲಿಮರು ಸಂತೋಷವನ್ನಾಚರಿಸುವ ದಿನವಾಗಿರುವುದು.[2] ಅಲ್ಲಾಹನು ತಾನಿಚ್ಛಿಸಿದವರಿಗೆ ಸಹಾಯ ನೀಡುತ್ತಾನೆ ಮತ್ತು ಅವನು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

غُلِبَتِ الرُّوۡمُ ﴿۲﴾ فِىۡۤ اَدۡنَى الۡاَرۡضِ
وَهُمۡ مِّنۡۢ بَعۡدِ غَلَبِهِمۡ سَيَغۡلِبُوۡنَ ﴿۳﴾
فِىۡ بِضۡعِ سِنِيۡنَ ؕ لِلّٰهِ الۡاَمۡرُ مِنۡ
قَبۡلُ وَمِنۡۢ بَعۡدُ ؕ وَيَوۡمَئِذٍ يَّفۡرَحُ
الۡمُؤۡمِنُوۡنَ ﴿۴﴾ بِنَصۡرِ اللّٰهِ ؕ يَنۡصُرُ مَنۡ
يَّشَآءُ ؕ وَهُوَ الۡعَزِيۡزُ الرَّحِيۡمُ ﴿۵﴾

6. ಇದು ಅಲ್ಲಾಹನು ಮಾಡಿದ ವಾಗ್ದಾನ. ಅಲ್ಲಾಹನು ಎಂದೂ ತನ್ನ ವಾಗ್ದಾನವನ್ನು ಉಲ್ಲಂಘಿಸುವುದಿಲ್ಲ. ಆದರೆ ಹೆಚ್ಚಿನವರು ತಿಳಿಯುವುದಿಲ್ಲ.

وَعۡدَ اللّٰهِ ؕ لَا يُخۡلِفُ اللّٰهُ وَعۡدَهٗ وَلٰكِنَّ
اَكۡثَرَ النَّاسِ لَا يَعۡلَمُوۡنَ ﴿۶﴾

7. ಜನರು ಲೌಕಿಕ ಜೀವನದ ಬಾಹ್ಯ ಮುಖವನ್ನು ಮಾತ್ರ ತಿಳಿಯುತ್ತಾರೆ ಮತ್ತು ಪರಲೋಕದ ಕುರಿತು ಸ್ವಯಂ ಬೋಧ ಶೂನ್ಯರಾಗಿದ್ದಾರೆ.

يَعۡلَمُوۡنَ ظَاهِرًا مِّنَ الۡحَيٰوةِ الدُّنۡيَا ۖۚ
وَهُمۡ عَنِ الۡاٰخِرَةِ هُمۡ غٰفِلُوۡنَ ﴿۷﴾

8. ಇವರೆಂದಾದರೂ ಸ್ವಯಂ ತಮ್ಮ ಕುರಿತಾಗಿ ವಿವೇಚಿಸಲಿಲ್ಲವೇ?

اَوَلَمۡ يَتَفَكَّرُوۡا فِىۡۤ اَنۡفُسِهِمۡ مَا خَلَقَ

1. ಇದು ಆ ಕಾಲದಲ್ಲಿ ರೋಮ್ ಮತ್ತು ಇರಾನಿನ ಸಾಮ್ರಾಜ್ಯಗಳ ನಡುವೆ ನಡೆಯುತ್ತಿದ್ದ ಯುದ್ಧದ ಕಡೆಗಿರುವ ಸೂಚನೆ. ಆಗ ರೋಮನ್ನರು ದಯನೀಯ ಸೋಲನುಭವಿಸಿದ್ದರು. ಅವರು ಮತ್ತೆ ಮೇಲೇಳುವರೆಂದು ಯಾರಿಗೂ ಕಲ್ಪಿಸಲಿಕ್ಕೂ ಸಾಧ್ಯವಿರಲಿಲ್ಲ. ಆದರೆ ಕೆಲವೇ ವರ್ಷಗಳಲ್ಲಿ ರೋಮನ್ನರು ಮತ್ತೆ ಪ್ರಬಲರಾಗುವರು ಎಂದು ಅಲ್ಲಾಹನು ಈ ಸೂಕ್ತದಲ್ಲಿ ಭವಿಷ್ಯ ನುಡಿದಿದ್ದಾನೆ.
2. ಇದು ಎರಡನೆಯ ಭವಿಷ್ಯವಾಣಿಯಾಗಿತ್ತು. ಒಂದೆಡೆ ಬದ್ರ್ ಯುದ್ಧದಲ್ಲಿ ಮುಸ್ಲಿಮರು ಜಯಗಳಿಸಿ, ಇನ್ನೊಂದೆಡೆ ರೋಮ್ ಮತ್ತು ಇರಾನಿನ ನಡುವಿನ ಯುದ್ಧದಲ್ಲಿ ರೋಮ್ ಜಯಗಳಿಸಿದ ಸಂದರ್ಭದಲ್ಲಿ ಜನರಿಗೆ ಇದರ ಅರ್ಥ ತಿಳಿಯಿತು.

ಅಲ್ಲಾಹನು ಆಕಾಶಗಳನ್ನೂ ಭೂಮಿಯನ್ನೂ ಅವುಗಳ ನಡುವೆ ಇರುವುದೆಲ್ಲವನ್ನೂ ಸತ್ಯಪೂರ್ಣವಾಗಿ ಮತ್ತು ಒಂದು ನಿರ್ದಿಷ್ಟ ಕಾಲಾವಧಿಗಾಗಿಯೇ ಸೃಷ್ಟಿಸಿದ್ದಾನೆ. ಆದರೆ ಅನೇಕರು ತಮ್ಮ ಪ್ರಭುವಿನ ಭೇಟಿಯನ್ನು ನಿರಾಕರಿಸುವವರಾಗಿರುತ್ತಾರೆ.[3]

اللّٰهُ السَّمٰوٰتِ وَالْاَرْضَ وَمَا بَيْنَهُمَآ
اِلَّا بِالْحَقِّ وَاَجَلٍ مُّسَمًّى ۗ وَاِنَّ
كَثِيْرًا مِّنَ النَّاسِ بِلِقَاۤئِ رَبِّهِمْ لَكٰفِرُوْنَ ٨

9. ಇವರಿಗಿಂತ ಮುಂಚೆ ಗತಿಸಿ ಹೋದವರ ಅಂತಿಮ ಪರಿಣಾಮ ಏನಾಯಿತೆಂದು ನೋಡಲು ಇವರೆಂದೂ ಭೂಮಿಯ ಮೇಲೆ ಸಂಚರಿಸಲಿಲ್ಲವೇ? ಅವರು ಇವರಿಗಿಂತಲೂ ಹೆಚ್ಚು ಬಲಶಾಲಿಗಳಾಗಿದ್ದರು. ಅವರು ಭೂಮಿಯನ್ನು ಚೆನ್ನಾಗಿ ಅಗೆದಿದ್ದರು ಮತ್ತು ಅದನ್ನು ಇವರು ಮಾಡಿರುವುದಕ್ಕಿಂತ ಅಧಿಕ ಸಮೃದ್ಧವಾಗಿ ಮಾಡಿದ್ದರು. ಅವರ ಬಳಿಗೆ ಅವರ ಸಂದೇಶವಾಹಕರು ಸುವ್ಯಕ್ತ ನಿದರ್ಶನಗಳನ್ನು ತಂದರು. ಅಲ್ಲಾಹನು ಅವರ ಮೇಲೆ ಅಕ್ರಮ ವೆಸಗುವವನಾಗಿರಲಿಲ್ಲ. ಆದರೆ ಅವರು ತಾವೇ ತಮ್ಮ ಮೇಲೆ ಅಕ್ರಮವೆಸಗುತ್ತಿದ್ದರು.

اَوَلَمْ يَسِيْرُوْا فِى الْاَرْضِ فَيَنْظُرُوْا
كَيْفَ كَانَ عَاقِبَةُ الَّذِيْنَ مِنْ قَبْلِهِمْ ۗ
كَانُوْٓا اَشَدَّ مِنْهُمْ قُوَّةً وَّاَثَارُوا الْاَرْضَ
وَعَمَرُوْهَآ اَكْثَرَ مِمَّا عَمَرُوْهَا وَجَاۤءَتْهُمْ
رُسُلُهُمْ بِالْبَيِّنٰتِ ۗ فَمَا كَانَ اللّٰهُ
لِيَظْلِمَهُمْ وَلٰكِنْ كَانُوْٓا اَنْفُسَهُمْ يَظْلِمُوْنَ ٩

10. ಕೊನೆಗೆ ಪಾಪಕರ್ಮಗಳನ್ನು ಎಸಗಿದ್ದವರ ಪರಿಣಾಮವು ಬಹಳ ಕೆಟ್ಟದಾಯಿತು. ಏಕೆಂದರೆ ಅವರು ಅಲ್ಲಾಹನ ಸೂಕ್ತಗಳನ್ನು ಸುಳ್ಳಾಗಿಸಿದ್ದರು ಮತ್ತು ಅವರು ಅವುಗಳನ್ನು ಅಪಹಾಸ್ಯ ಮಾಡುತ್ತಿದ್ದರು.

ثُمَّ كَانَ عَاقِبَةَ الَّذِيْنَ اَسَاۤءُوا السُّوْۤآٰى
اَنْ كَذَّبُوْا بِاٰيٰتِ اللّٰهِ وَكَانُوْا
بِهَا يَسْتَهْزِءُوْنَ ١٠

11. ಅಲ್ಲಾಹನೇ ಸೃಷ್ಟಿಯ ಆರಂಭ ಮಾಡುತ್ತಾನೆ. ಅವನೇ ಅದರ ಪುನರಾವರ್ತನೆ ಮಾಡುವನು. ಮುಂದೆ ಅವನ ಕಡೆಗೇ ನೀವು ಮರಳಿಸಲ್ಪಡುವಿರಿ.

اَللّٰهُ يَبْدَؤُا الْخَلْقَ ثُمَّ يُعِيْدُهٗ ثُمَّ
اِلَيْهِ تُرْجَعُوْنَ ١١

12. ಆ ಘಳಿಗೆ ಬಂದೆರಗುವ ದಿನ ಅಪರಾಧಿಗಳು ಮೂಕವಿಸ್ಮಿತರಾಗಿ ಬಿಡುವರು.[4]

وَيَوْمَ تَقُوْمُ السَّاعَةُ يُبْلِسُ الْمُجْرِمُوْنَ ١٢

13. ಅವರು ಮಾಡಿಕೊಂಡಿದ್ದ ಸಹಭಾಗಿಗಳಲ್ಲಿ ಯಾರೂ ಅವರ

وَلَمْ يَكُنْ لَّهُمْ مِّنْ شُرَكَاۤىِٕهِمْ شُفَعٰۤؤُا

3. ಅರ್ಥಾತ್- ನಿಸರ್ಗ ವ್ಯವಸ್ಥೆಯನ್ನು ಮಾನವ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿ ನೋಡಿದರೆ ಅವನಿಗೆ ಎರಡು ವಾಸ್ತವಿಕತೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಮೊದಲನೆಯದಾಗಿ ಇದು ಯಾವುದಾದರೊಬ್ಬ ಆಡುವವನ ಆಟಿಕೆಯಲ್ಲ. ಬದಲಾಗಿ ಯುಕ್ತಿಪೂರ್ಣವಾದ ಮತ್ತು ಉದ್ದೇಶವನ್ನು ಹೊಂದಿರುವ ಒಂದು ವ್ಯವಸ್ಥೆಯಾಗಿದೆ. ಎರಡನೆಯದಾಗಿ ಇದು ಶಾಶ್ವತವಾದ ವ್ಯವಸ್ಥೆಯೇನಲ್ಲ. ಬದಲಾಗಿ ಒಂದು ದಿನ ಇದು ಕೊನೆಗೊಂಡೇ ತೀರುವುದು. ಈ ಎರಡೂ ವಿಷಯಗಳು ಪರಲೋಕ ಜೀವನಕ್ಕೆ ಸಾಕ್ಷ್ಯ ಒದಗಿಸುತ್ತವೆ. ಆದರೆ ಇದೆಲ್ಲವನ್ನು ನೋಡುತ್ತಲೂ ಜನರು ಅದನ್ನು ನಿರಾಕರಿಸುತ್ತಾರೆ.

4. ಮೂಲದಲ್ಲಿ 'ಮುಬ್ಲಿಸೂನ್' ಎಂಬ ಪದ ಪ್ರಯೋಗವಾಗಿದೆ. 'ಇಬ್ಲಾಸ್' ಎಂದರೆ ದುಃಖ ಮತ್ತು ನಿರಾಶೆಯಿಂದ ಒಬ್ಬ ವ್ಯಕ್ತಿ ಖಿನ್ನನಾಗಿ ಮೌನಿಯಾಗಿ ಮಾರ್ಪಡುವುದು.

ಶಿಫಾರಸುದಾರರಾಗಲಾರರು ಮತ್ತು ಅವರು ತಮ್ಮ ಸಹಭಾಗಿಗಳ ನಿಷೇಧಕರಾಗುವರು.[5]

وَكَانُوا بِشُرَكَائِهِمْ كَافِرِينَ ١٣

14. ಆ ಘಳಿಗೆಯು ಬಂದೆರಗುವ ದಿನ (ಸಕಲ ಮಾನವರೂ) ಬೇರೆ ಬೇರೆ ಪಂಗಡಗಳಲ್ಲಿ ಹಂಚಿ ಹೋಗುವರು.

وَيَوْمَ تَقُومُ السَّاعَةُ يَوْمَئِذٍ يَتَفَرَّقُونَ ١٤

15. ಸತ್ಯವಿಶ್ವಾಸವಿರಿಸಿದವರು ಮತ್ತು ಸತ್ಕರ್ಮವೆಸಗಿದವರು ಒಂದು ಉದ್ಯಾನದಲ್ಲಿ ಹರ್ಷೋಲ್ಲಾಸದೊಂದಿಗೆ ಇರಿಸಲ್ಪಡುವರು.

فَأَمَّا الَّذِينَ آمَنُوا وَعَمِلُوا الصَّالِحَاتِ
فَهُمْ فِي رَوْضَةٍ يُحْبَرُونَ ١٥

16. ಸತ್ಯನಿಷೇಧಿಗಳು ಮತ್ತು ನಮ್ಮ ಸೂಕ್ತಗಳನ್ನೂ ಪರಲೋಕದ ಭೇಟಿಯನ್ನೂ ಸುಳ್ಳಾಗಿಸಿದವರು ಯಾತನೆಯಲ್ಲಿ ಉಪಸ್ಥಿತರಾಗಿ ಇರಿಸಲ್ಪಡುವರು.

وَأَمَّا الَّذِينَ كَفَرُوا وَكَذَّبُوا بِآيَاتِنَا
وَلِقَاءِ الْآخِرَةِ فَأُولَٰئِكَ فِي الْعَذَابِ
مُحْضَرُونَ ١٦

17. ಆದುದರಿಂದ ನೀವು ಸಂಧ್ಯಾಕಾಲ ಬಂದಾಗಲೂ ಪ್ರಾತಃಕಾಲವಾದಾಗಲೂ ಅಲ್ಲಾಹನ ಗುಣಗಾನ ಮಾಡಿರಿ.

فَسُبْحَانَ اللَّهِ حِينَ تُمْسُونَ وَحِينَ
تُصْبِحُونَ ١٧

18. ಭೂಮಿ-ಆಕಾಶಗಳಲ್ಲಿ ಸ್ತುತಿಸ್ತೋತ್ರಗಳು ಅವನಿಗೇ ಮೀಸಲು ಮತ್ತು ಮೂರನೆಯ ಜಾವದಲ್ಲೂ ನಿಮಗೆ 'ಝುಹರ್' ಸಮಯ ಬಂದಾಗಲೂ (ಅವನ ಗುಣಗಾನ ಮಾಡಿರಿ).[6]

وَلَهُ الْحَمْدُ فِي السَّمَاوَاتِ وَالْأَرْضِ
وَعَشِيًّا وَحِينَ تُظْهِرُونَ ١٨

19. ಅವನು ಸಜೀವಿಯನ್ನು ನಿರ್ಜೀವಿಯಿಂದ ಹೊರತೆಗೆಯುತ್ತಾನೆ, ನಿರ್ಜೀವಿಯನ್ನು ಸಜೀವಿಯಿಂದ ಹೊರ ತೆಗೆಯುತ್ತಾನೆ ಮತ್ತು ಭೂಮಿಗೆ ಅದರ ಮರಣದ ಬಳಿಕ ಮತ್ತೆ ಜೀವದಾನ ಮಾಡುತ್ತಾನೆ. ಇದೇ ರೀತಿಯಲ್ಲಿ ನೀವು (ಮರಣಾವಸ್ಥೆಯಿಂದ) ಹೊರ ತೆಗೆಯಲ್ಪಡುವಿರಿ.

يُخْرِجُ الْحَيَّ مِنَ الْمَيِّتِ وَيُخْرِجُ
الْمَيِّتَ مِنَ الْحَيِّ وَيُحْيِي الْأَرْضَ
بَعْدَ مَوْتِهَا ۚ وَكَذَٰلِكَ تُخْرَجُونَ ١٩ ع

20. ಅವನು ನಿಮ್ಮನ್ನು ಮಣ್ಣಿನಿಂದ ಸೃಷ್ಟಿಸಿದುದು, ತರುವಾಯ ಒಮ್ಮೆಲೇ ನೀವು ಮಾನವರಾಗಿ (ಭೂಮಿಯಲ್ಲಿ) ಹಬ್ಬುತ್ತಾ ಹೋಗುತ್ತಿರುವುದು ಅವನ ನಿದರ್ಶನಗಳಲ್ಲೊಂದಾಗಿದೆ.

وَمِنْ آيَاتِهِ أَنْ خَلَقَكُمْ مِنْ تُرَابٍ
ثُمَّ إِذَا أَنْتُمْ بَشَرٌ تَنْتَشِرُونَ ٢٠

21. ಅವನು ನಿಮಗಾಗಿ ನಿಮ್ಮ ವರ್ಗದಿಂದಲೇ ಜೋಡಿಗಳನ್ನು

وَمِنْ آيَاتِهِ أَنْ خَلَقَ لَكُمْ مِنْ أَنْفُسِكُمْ

5. ಅರ್ಥಾತ್- ಆಗ ಬಹುದೇವವಿಶ್ವಾಸಿಗಳು ಸ್ವತಃ ನಾವು ಇವರನ್ನು ದೇವನಿಗೆ ಭಾಗೀದಾರರನ್ನಾಗಿ ನಿಶ್ಚಯಿಸುವಲ್ಲಿ ತಪ್ಪಿದ್ದೆವು ಎಂದು ಸಮ್ಮತಿಸುವರು.

6. ಈ ಸೂಕ್ತದಲ್ಲಿ ನಮಾಝ್‌ನ ನಾಲ್ಕು ಸಮಯಗಳ ಕಡೆಗೆ ಸ್ಪಷ್ಟವಾದ ಸೂಚನೆ ಇದೆ. ಫಜ್ರ್, ಮಗ್ರಿಬ್, ಅಸರ್ ಮತ್ತು ಝುಹರ್ ನಮಾಝ್‌ಗಳು. ಇದರ ಜತೆಗೆ ಹೂದ್ ಅಧ್ಯಾಯದ 114, ಬನೀಇಸ್ರಾಈಲ್‌ನ 78, ಮತ್ತು ತಾಹಾದ 130ನೆಯ ಸೂಕ್ತವನ್ನು ಸೇರಿಸಿ ಓದಿದರೆ ನಮಾಝ್‌ನ ಐದೂ ಹೊತ್ತಿನ ಆದೇಶ ಹೊರಡುತ್ತದೆ.

ಸೃಷ್ಟಿಸಿ, ನೀವು ಅವರ ಬಳಿ ಪ್ರಶಾಂತಿಯನ್ನು ಪಡೆಯುವಂತೆ ಮಾಡಿದುದು ಮತ್ತು ನಿಮ್ಮ ನಡುವೆ ಪ್ರೇಮ ಮತ್ತು ಅನುಕಂಪ ವನ್ನುಂಟು ಮಾಡಿದುದೂ ಅವನ ನಿದರ್ಶನಗಳಲ್ಲೊಂದಾಗಿದೆ. ನಿಶ್ಚಯವಾಗಿಯೂ ವಿವೇಚಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

أَزْوَاجًا لِّتَسْكُنُوٓا إِلَيْهَا وَجَعَلَ بَيْنَكُم
مَّوَدَّةً وَرَحْمَةً ۚ إِنَّ فِى ذَٰلِكَ لَءَايَٰتٍ
لِّقَوْمٍ يَتَفَكَّرُونَ ﴿٢١﴾

22. ಆಕಾಶಗಳ ಮತ್ತು ಭೂಮಿಯ ಸೃಷ್ಟಿಯೂ ನಿಮ್ಮ ಭಾಷೆಗಳ ಹಾಗೂ ವರ್ಣಗಳ ತಾರತಮ್ಯವೂ ಅವನ ನಿದರ್ಶನಗಳಲ್ಲಿ ಒಂದಾಗಿದೆ. ನಿಶ್ಚಯವಾಗಿಯೂ ಜ್ಞಾನಿಗಳಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

وَمِنْ ءَايَٰتِهِۦ خَلْقُ ٱلسَّمَٰوَٰتِ وَٱلْأَرْضِ
وَٱخْتِلَٰفُ أَلْسِنَتِكُمْ وَأَلْوَٰنِكُمْ ۚ إِنَّ
فِى ذَٰلِكَ لَءَايَٰتٍ لِّلْعَٰلِمِينَ ﴿٢٢﴾

23. ಇರುಳು ಹಗಲುಗಳಲ್ಲಿ ನಿಮ್ಮ ನಿದ್ರೆಯೂ ನೀವು ಅವನ ಅನುಗ್ರಹವನ್ನರಸುವುದೂ ಅವನ ನಿದರ್ಶನಗಳಲ್ಲೊಂದಾಗಿದೆ. ನಿಶ್ಚಯವಾಗಿಯೂ ಲಕ್ಷ್ಯವಿಟ್ಟು ಆಲಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

وَمِنْ ءَايَٰتِهِۦ مَنَامُكُم بِٱلَّيْلِ وَٱلنَّهَارِ
وَٱبْتِغَآؤُكُم مِّن فَضْلِهِۦٓ ۚ إِنَّ فِى ذَٰلِكَ
لَءَايَٰتٍ لِّقَوْمٍ يَسْمَعُونَ ﴿٢٣﴾

24. ಅವನು ನಿಮಗೆ ಭಯದೊಂದಿಗೂ ನಿರೀಕ್ಷೆಯೊಂದಿಗೂ ಮಿಂಚಿನ ಹೊಳಪನ್ನು ತೋರಿಸುವುದು ಹಾಗೂ ಆಕಾಶದಿಂದ ನೀರನ್ನು ಸುರಿಸುವುದು ಅನಂತರ ಅದರ ಮೂಲಕ- ನೆಲಕ್ಕೆ ಅದರ ಮರಣದ ಬಳಿಕ- ಮತ್ತೆ ಜೀವ ನೀಡುವುದು ಅವನ ನಿದರ್ಶನ ಗಳಲ್ಲಿ ಸೇರಿವೆ. ನಿಶ್ಚಯವಾಗಿಯೂ ವಿವೇಕಿಗಳಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

وَمِنْ ءَايَٰتِهِۦ يُرِيكُمُ ٱلْبَرْقَ خَوْفًا وَ
طَمَعًا وَيُنَزِّلُ مِنَ ٱلسَّمَآءِ مَآءً فَيُحْىِۦ
بِهِ ٱلْأَرْضَ بَعْدَ مَوْتِهَآ ۚ إِنَّ فِى
ذَٰلِكَ لَءَايَٰتٍ لِّقَوْمٍ يَعْقِلُونَ ﴿٢٤﴾

25. ಆಕಾಶ ಮತ್ತು ಭೂಮಿ ಅವನ ಅಪ್ಪಣೆಯಿಂದ ಸ್ಥಾಪಿತವಾಗಿರು ವುದು ಅವನ ನಿದರ್ಶನಗಳಲ್ಲೊಂದಾಗಿದೆ. ಮುಂದೆ ಅವನು ನಿಮ್ಮನ್ನು ಭೂಮಿಯಿಂದ ಕೂಗಿ ಕರೆದೊಡನೆ ಒಂದೇ ಕರೆಗೆ ನೀವು ಥಟ್ಟನೆ ಹೊರಟು ಬರುವಿರಿ.

وَمِنْ ءَايَٰتِهِۦٓ أَن تَقُومَ ٱلسَّمَآءُ وَ
ٱلْأَرْضُ بِأَمْرِهِۦ ۚ ثُمَّ إِذَا دَعَاكُمْ دَعْوَةً
مِّنَ ٱلْأَرْضِ إِذَآ أَنتُمْ تَخْرُجُونَ ﴿٢٥﴾

26. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಎಲ್ಲರೂ ಅವನ ದಾಸರು. ಎಲ್ಲರೂ ಅವನ ಆಜ್ಞಾಧೀನರೇ ಆಗಿರುತ್ತಾರೆ.

وَلَهُۥ مَن فِى ٱلسَّمَٰوَٰتِ وَٱلْأَرْضِ ۖ
كُلٌّ لَّهُۥ قَٰنِتُونَ ﴿٢٦﴾

27. ಸೃಷ್ಟಿಯ ಆರಂಭ ಮಾಡುವವನೂ ಅವನೇ ಮತ್ತು ಅದರ ಪುನರಾವರ್ತನೆ ಮಾಡುವವನೂ ಅವನೇ. ಇದು ಅವನಿಗೆ ಅತ್ಯಂತ ಸುಲಭವಾದುದು. ಭೂಮಿ-ಆಕಾಶಗಳಲ್ಲಿ ಅವನ ಗುಣವು ಸರ್ವಶ್ರೇಷ್ಠವಾಗಿದ್ದು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَهُوَ ٱلَّذِى يَبْدَؤُا۟ ٱلْخَلْقَ ثُمَّ يُعِيدُهُۥ
وَهُوَ أَهْوَنُ عَلَيْهِ ۚ وَلَهُ ٱلْمَثَلُ ٱلْأَعْلَىٰ
فِى ٱلسَّمَٰوَٰتِ وَٱلْأَرْضِ ۚ وَهُوَ ٱلْعَزِيزُ
ٱلْحَكِيمُ ﴿٢٧﴾ ع

28. ಅವನು ನಿಮಗೆ ನಿಮ್ಮಿಂದಲೇ ಒಂದು ಉಪಮೆ ಕೊಡುತ್ತಾನೆ. ನಿಮ್ಮ ಸ್ವಾಧೀನವಿರುವ ನಿಮ್ಮ ಗುಲಾಮರಲ್ಲಿ ಕೆಲವರು ನಾವು ನಿಮಗೆ ನೀಡಿರುವ ಸಂಪತ್ತಿನಲ್ಲಿ ನಿಮ್ಮೊಂದಿಗೆ ಸರಿಸಮಾನ ಪಾಲುದಾರರಾಗಿದ್ದಾರೆಯೇ ಮತ್ತು ನೀವು ನಿಮ್ಮ ಸರಿಸಾಟಿಯಾಗಿ ರುವವರನ್ನು ಹೆದರುವಂತೆಯೇ ಅವರನ್ನೂ ಹೆದರುತ್ತೀರಾ?[7] - ಈ ರೀತಿಯಲ್ಲಿ ನಾವು ವಿವೇಕವನ್ನು ಬಳಸುವವರಿಗಾಗಿ ನಮ್ಮ ಸೂಕ್ತಗಳನ್ನು ಸ್ಪಷ್ಟವಾಗಿ ವಿವರಿಸುತ್ತೇವೆ.

ضَرَبَ لَكُمْ مَّثَلًا مِّنْ اَنْفُسِكُمْ ؕ هَلْ
لَّكُمْ مِّنْ مَّا مَلَكَتْ اَيْمَانُكُمْ مِّنْ شُرَكَآءَ
فِيْ مَا رَزَقْنٰكُمْ فَاَنْتُمْ فِيْهِ سَوَآءٌ
تَخَافُوْنَهُمْ كَخِيْفَتِكُمْ اَنْفُسَكُمْ ؕ كَذٰلِكَ
نُفَصِّلُ الْاٰيٰتِ لِقَوْمٍ يَّعْقِلُوْنَ ﴿۲۸﴾

29. ಆದರೆ ಈ ಅಕ್ರಮಿಗಳು ಏನೂ ಅರ್ಥ ಮಾಡಿಕೊಳ್ಳದೆ ತಮ್ಮ ಊಹೆಗಳನ್ನು ಅನುಸರಿಸುತ್ತಿದ್ದಾರೆ. ಅಲ್ಲಾಹನೇ ದಾರಿಗೆಡಿಸಿ ಬಿಟ್ಟವನಿಗೆ ಮಾರ್ಗದರ್ಶನ ನೀಡುವವನು ಇನ್ನಾರಿದ್ದಾನೆ? ಇಂತಹ ವರಿಗೆ ಯಾರೂ ಸಹಾಯಕನಾಗಲಾರ.

بَلِ اتَّبَعَ الَّذِيْنَ ظَلَمُوْۤا اَهْوَآءَهُمْ
بِغَيْرِ عِلْمٍ ۚ فَمَنْ يَّهْدِيْ مَنْ اَضَلَّ
اللّٰهُ ؕ وَمَا لَهُمْ مِّنْ نّٰصِرِيْنَ ﴿۲۹﴾

30. ಆದುದರಿಂದ (ಸಂದೇಶವಾಹಕರೇ ಮತ್ತವರ ಅನುಯಾಯಿಗಳೇ) ನೀವು ಏಕನಿಷ್ಠೆಯಿಂದ ನಿಮ್ಮ ಮುಖವನ್ನು ಈ ಧರ್ಮದ ಕಡೆ ಕೇಂದ್ರೀಕರಿಸಿರಿ. ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿ ಯಲ್ಲೇ ಸ್ಥಿರವಾಗಿರಿ. ಅಲ್ಲಾಹನು ಮಾಡಿದ ರಚನೆಯನ್ನು ಬದ ಲಾಯಿಸಲಾಗದು.[8] ಇದುವೇ ಸತ್ಯ ಮತ್ತು ಸರಿಯಾದ ಧರ್ಮ ವಾಗಿದೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ.

فَاَقِمْ وَجْهَكَ لِلدِّيْنِ حَنِيْفًا ؕ فِطْرَتَ
اللّٰهِ الَّتِيْ فَطَرَ النَّاسَ عَلَيْهَا ؕ لَا
تَبْدِيْلَ لِخَلْقِ اللّٰهِ ؕ ذٰلِكَ الدِّيْنُ
الْقَيِّمُ ۙ وَلٰكِنَّ اَكْثَرَ النَّاسِ لَا يَعْلَمُوْنَ ﴿۳۰﴾

31-32. ಅಲ್ಲಾಹನೆಡೆಗೆ ಮರಳುತ್ತ ಮತ್ತು ಅವನನ್ನು ಭಯಪಡುತ್ತ (ಇದರಲ್ಲೇ ಸ್ಥಿರವಾಗಿರಿ) ಹಾಗೂ ನಮಾಝನ್ನು ಸಂಸ್ಥಾಪಿಸಿರಿ ಮತ್ತು ತಮ್ಮ ತಮ್ಮ ಧರ್ಮವನ್ನು ಭಿನ್ನವಾಗಿರಿಸಿಕೊಂಡ ಹಾಗೂ ಪಂಗಡಗಳಾಗಿ ವಿಂಗಡಿತರಾಗಿರುವ ಬಹುದೇವ ವಿಶ್ವಾಸಿ

مُنِيْبِيْنَ اِلَيْهِ وَاتَّقُوْهُ وَاَقِيْمُوا الصَّلٰوةَ
وَلَا تَكُوْنُوْا مِنَ الْمُشْرِكِيْنَ ﴿۳۱﴾
مِنَ الَّذِيْنَ فَرَّقُوْا دِيْنَهُمْ وَكَانُوْا

7. ಇದು ಅನ್ನಹ್ಲ್ ಅಧ್ಯಾಯದ 62ನೆಯ ಸೂಕ್ತದಲ್ಲಿ ಬಂದ ವಿಷಯವೇ ಆಗಿದೆ. 'ನೀವು ನಿಮ್ಮ ಸೊತ್ತಿನಲ್ಲಿ ನಿಮ್ಮ ದಾಸರನ್ನು ಭಾಗಿದಾರರೆಂದು ಕಲ್ಪಿಸಲಾರಿರಿ ಎಂದಾದರೆ' ದೇವನು ತನ್ನ ದೇವತ್ವದಲ್ಲಿ ದಾಸರನ್ನು ಭಾಗೀದಾರರನ್ನಾಗಿ ಮಾಡುತ್ತಾನೆಂಬ ವಿಷಯ ಹೇಗೆ ನಿಮ್ಮ ತಲೆಗೆ ಹೊಕ್ಕಿತು ಎಂಬ ವಿಷಯದ ಬಗ್ಗೆಯೇ ಎರಡೂ ಕಡೆ ಒತ್ತು ಕೊಡಲಾಗಿದೆ.

8. ಅರ್ಥಾತ್- ದೇವನು ಮಾನವನನ್ನು ತನ್ನ ದಾಸನಾಗಿ ಮಾಡಿದ್ದಾನೆ. ತನ್ನ ದಾಸ್ಯಕ್ಕಾಗಿಯೇ ಅವನು ಮಾನವನನ್ನು ಸೃಷ್ಟಿಸಿದ್ದಾನೆ. ಅವನ ಈ ಸ್ಥಿತಿಯನ್ನು ಯಾರಿಗೂ ಬದಲಿಸಲು ಸಾಧ್ಯವಿಲ್ಲ. ವ್ಯಕ್ತಿ, ದಾಸ್ಯದ ತನ್ನ ಸ್ಥಾನದಿಂದ ಮುಕ್ತನಾಗಲು ಸಾಧ್ಯವಿಲ್ಲ. ಹಾಗೆಯೇ ಅಲ್ಲಾಹನ ಹೊರತು ಬೇರೆ ಯಾರನ್ನಾದರೂ ದೇವನೆಂದು ಪರಿಗಣಿಸಿದರೆ ಅದು ನಿಜಾರ್ಥದಲ್ಲಿ ದೇವನಾಗಿ ಬಿಡಲು ಸಾಧ್ಯವಿಲ್ಲ. ಮಾನವನು ತನ್ನ ಪಾಲಿಗೆ ಎಷ್ಟೇ ದೇವರನ್ನು ಮಾಡಿಕೊಂಡರೂ ಅವನು ಒಬ್ಬ ದೇವನ ಹೊರತು ಬೇರಾರ ದಾಸನೂ ಅಲ್ಲ ಎಂಬ ವಾಸ್ತವಿಕತೆ ಅತ್ಯಂತ ನಿಶ್ಚಿತವಾದುದು. ಅದರ ಇನ್ನೊಂದು ಭಾಷಾಂತರ "ಅಲ್ಲಾಹನ ರಚನೆಯಲ್ಲಿ ಬದಲಾವಣೆ ಮಾಡದಿರಿ" ಎಂದಾಗಬಹುದು. ಅರ್ಥಾತ್, ಅಲ್ಲಾಹನು ಯಾವ ಪ್ರಕೃತಿಯಲ್ಲಿ ಮಾನವನನ್ನು ಸೃಷ್ಟಿಸಿದ್ದಾನೋ ಅದನ್ನು ಕೆಡಿಸುವುದು ಅಥವಾ ವಿರೂಪಗೊಳಿಸುವುದು ಸರಿಯಲ್ಲ.

شِيَعًا ۗ كُلُّ حِزْبٍ بِمَا لَدَيْهِمْ فَرِحُونَ ﴿٣٢﴾

ಗಳಲ್ಲಾಗಬೇಡಿರಿ. ಪ್ರತಿಯೊಂದು ಪಂಗಡವೂ ತನ್ನ ಬಳಿ ಏನಿದೆಯೋ ಅದರಲ್ಲೇ ತಲ್ಲೀನವಾಗಿದೆ.

وَإِذَا مَسَّ النَّاسَ ضُرٌّ دَعَوْا رَبَّهُمْ
مُّنِيبِينَ إِلَيْهِ ثُمَّ إِذَا أَذَاقَهُمْ مِّنْهُ
رَحْمَةً إِذَا فَرِيقٌ مِّنْهُمْ بِرَبِّهِمْ
يُشْرِكُونَ ﴿٣٣﴾
لِيَكْفُرُوا بِمَا آتَيْنَاهُمْ ۚ فَتَمَتَّعُوا ۖ
فَسَوْفَ تَعْلَمُونَ ﴿٣٤﴾

33-34. ಜನರಿಗೇನಾದರೂ ಕಷ್ಟ ಬಂದಾಗ ಅವರು ತಮ್ಮ ಪ್ರಭುವಿನ ಕಡೆಗೆ ಮರಳಿ ಅವನನ್ನು ಪ್ರಾರ್ಥಿಸುತ್ತಾರೆ. ತರುವಾಯ ಅವನು ಅವರಿಗೆ ತನ್ನ ಕರುಣೆಯ ರಸಾಸ್ವಾದನ ಮಾಡಿಸಿದಾಗ ಹಠಾತ್ತನೆ ಅವರಲ್ಲಿ ಕೆಲವರು ನಾವು ಮಾಡಿದ ಉಪಕಾರಕ್ಕೆ ಕೃತಘ್ನತೆ ತೋರಿಸಲಿಕ್ಕಾಗಿ 'ದೇವಸಹಭಾಗಿತ್ವ' ಮಾಡತೊಡಗುತ್ತಾರೆ. ಸರಿ, ಸುಖ ಪಟ್ಟುಕೊಳ್ಳಿರಿ. ಸದ್ಯದಲ್ಲೇ ನಿಮಗೆ ತಿಳಿದೀತು.

أَمْ أَنزَلْنَا عَلَيْهِمْ سُلْطَانًا فَهُوَ يَتَكَلَّمُ
بِمَا كَانُوا بِهِ يُشْرِكُونَ ﴿٣٥﴾

35. ಇವರು ಮಾಡುತ್ತಿರುವ 'ದೇವಸಹಭಾಗಿತ್ವ' ಸತ್ಯವೆಂಬ ಬಗ್ಗೆ ಸಾಕ್ಷ್ಯ ನೀಡುವಂತಹ ಯಾವುದಾದರೂ ಪುರಾವೆಯನ್ನು ನಾವು ಇವರ ಮೇಲೆ ಅವತೀರ್ಣಗೊಳಿಸಿದ್ದುಂಟೇ?

وَإِذَا أَذَقْنَا النَّاسَ رَحْمَةً فَرِحُوا بِهَا ۖ
وَإِن تُصِبْهُمْ سَيِّئَةٌ بِمَا قَدَّمَتْ
أَيْدِيهِمْ إِذَا هُمْ يَقْنَطُونَ ﴿٣٦﴾

36. ನಾವು ಜನರಿಗೆ ಕೃಪೆಯ ಸವಿಯುಣಿಸಿದಾಗ ಅವರು ಅದರಿಂದ ಹಿಗ್ಗಿ ಬಿಡುತ್ತಾರೆ ಮತ್ತು ಅವರ ಸ್ವಯಂಕೃತ ದುಷ್ಕೃತ್ಯಗಳಿಂದಾಗಿ ಅವರ ಮೇಲೇನಾದರೂ ಕಷ್ಟ ಬಂದಾಗ ಕೂಡಲೇ ಅವರು ನಿರಾಶರಾಗುತ್ತಾರೆ.

أَوَلَمْ يَرَوْا أَنَّ اللَّهَ يَبْسُطُ الرِّزْقَ
لِمَن يَشَاءُ وَيَقْدِرُ ۚ إِنَّ فِي ذَٰلِكَ
لَآيَاتٍ لِّقَوْمٍ يُؤْمِنُونَ ﴿٣٧﴾

37. ಅಲ್ಲಾಹನೇ ತಾನಿಚ್ಛಿಸಿದವರಿಗೆ ಜೀವನಾಧಾರ ವಿಸ್ತೃತಗೊಳಿಸುತ್ತಾನೆ ಮತ್ತು (ತಾನಿಚ್ಛಿಸಿದವರಿಗೆ) ಸಂಕುಚಿತಗೊಳಿಸುತ್ತಾನೆಂಬುದನ್ನು ಇವರು ನೋಡುತ್ತಿಲ್ಲವೇ? ಇದರಲ್ಲಿ ಸತ್ಯವಿಶ್ವಾಸಿಗಳಿಗೆ ಅನೇಕ ದೃಷ್ಟಾಂತಗಳಿವೆ.

فَآتِ ذَا الْقُرْبَىٰ حَقَّهُ وَالْمِسْكِينَ
وَابْنَ السَّبِيلِ ۚ ذَٰلِكَ خَيْرٌ لِّلَّذِينَ
يُرِيدُونَ وَجْهَ اللَّهِ ۖ وَأُولَٰئِكَ
هُمُ الْمُفْلِحُونَ ﴿٣٨﴾

38. ಆದುದರಿಂದ (ಸತ್ಯವಿಶ್ವಾಸಿಗಳೇ) ಸಂಬಂಧಿಕನಿಗೆ ಅವನ ಹಕ್ಕನ್ನು ಕೊಡು ಮತ್ತು ದರಿದ್ರನಿಗೂ ಪ್ರಯಾಣಿಕನಿಗೂ (ಅವನವನ ಹಕ್ಕನ್ನು ಕೊಡು)[9] ಅಲ್ಲಾಹನ ಸಂಪ್ರೀತಿಯನ್ನು ಬಯಸುವವರಿಗೆ ಈ ಕ್ರಮ ಉತ್ತಮವಾಗಿದೆ ಮತ್ತು ಅವರೇ ಯಶಸ್ವಿಗಳಾಗುವವರು.

وَمَا آتَيْتُم مِّن رِّبًا لِّيَرْبُوَ فِي أَمْوَالِ
النَّاسِ فَلَا يَرْبُو عِندَ اللَّهِ ۖ وَمَا

39. ಜನರ ಸೊತ್ತಿನಲ್ಲಿ ಸೇರಿ ವೃದ್ಧಿಯಾಗಬೇಕೆಂದು ನೀವು ಕೊಡುವ ಬಡ್ಡಿಯು ಅಲ್ಲಾಹನ ಬಳಿ ವೃದ್ಧಿಸುವುದಿಲ್ಲ.[10] ನೀವು ಅಲ್ಲಾಹನ

9. ಇಲ್ಲಿ ಕುಟುಂಬಸ್ಥರಿಗೆ ಹಾಗೂ ದರಿದ್ರರು ಮತ್ತು ಯಾತ್ರಿಕರಿಗೆ ದಾನ ನೀಡಿರಿ ಎಂದು ಹೇಳಲಾಗಿಲ್ಲ. ಇದು ನೀನು ಕೊಡಲೇಬೇಕಾದ ಹಕ್ಕು ಎಂದು ಹೇಳಲಾಗಿದೆ. ಆದ್ದರಿಂದ ಅದನ್ನು ಅವರ ಹಕ್ಕೆಂದೇ ಬಗೆದು ಪಾವತಿಸಬೇಕಾಗಿದೆ.

10. ಇದು ಬಡ್ಡಿಯನ್ನು ಖಂಡಿಸಿ ಅವತೀರ್ಣಗೊಂಡ ಪವಿತ್ರ ಕುರ್ಆನಿನ ಮೊದಲನೆಯ ಸೂಕ್ತವಾಗಿದೆ. ನಂತರದ ಆದೇಶಗಳಿಗಾಗಿ

ಸಂಪ್ರೀತಿ ಬಯಸಿ ಕೊಡುವ ಝಕಾತ್- ಇದನ್ನು ನೀಡುವವರೇ ವಾಸ್ತವದಲ್ಲಿ ತಮ್ಮ ಸಂಪತ್ತನ್ನು ವೃದ್ಧಿಸಿಕೊಳ್ಳುತ್ತಾರೆ.

اٰتَيۡتُمۡ مِّنۡ زَكٰوةٍ تُرِيۡدُوۡنَ وَجۡهَ
اللّٰهِ فَاُولٰٓـئِكَ هُمُ الۡمُضۡعِفُوۡنَ ٣٩

40. ಅಲ್ಲಾಹನೇ ನಿಮ್ಮನ್ನು ಸೃಷ್ಟಿಸಿದವನು, ತರುವಾಯ ನಿಮಗೆ ಜೀವನಾಧಾರ ನೀಡಿದವನು, ಅನಂತರ ಅವನು ನಿಮಗೆ ಮರಣ ಕೊಡುತ್ತಾನೆ ಮತ್ತೆ ಅವನು ನಿಮ್ಮನ್ನು ಜೀವಂತಗೊಳಿಸುವನು. ನೀವು ಮಾಡಿಕೊಂಡಿರುವ ಭಾಗೀದಾರರಲ್ಲಿ ಯಾರಾದರೂ ಈ ಕಾರ್ಯಗಳ ಪೈಕಿ ಯಾವುದನ್ನಾದರೂ ಮಾಡುವವರಿದ್ದಾರೆಯೇ? ಇವರು ಮಾಡುತ್ತಿರುವ 'ದೇವ ಸಹಭಾಗಿತ್ವ'ದಿಂದ ಅವನು ಪರಮ ಪಾವನನೂ ಅತ್ಯುನ್ನತನೂ ಆಗಿರುತ್ತಾನೆ.

اَللّٰهُ الَّذِىۡ خَلَقَكُمۡ ثُمَّ رَزَقَكُمۡ ثُمَّ
يُمِيۡتُكُمۡ ثُمَّ يُحۡيِيۡكُمۡ‌ؕ هَلۡ مِنۡ
شُرَكَآئِكُمۡ مَّنۡ يَّفۡعَلُ مِنۡ ذٰ لِكُمۡ
مِّنۡ شَىۡءٍ‌ؕ سُبۡحٰنَهٗ وَتَعٰلٰى عَمَّا يُشۡرِكُوۡنَ ٤٠

41. ಜನರ ಸ್ವಂತ ಕೈಗಳ ದುಡಿಮೆಯಿಂದ ನೆಲ-ಜಲಗಳಲ್ಲಿ ಕ್ಷೋಭೆ ಯುಂಟಾಗಿ ಬಿಟ್ಟಿದೆ.[11] ಇದು ಜನರಿಗೆ ಅವರ ಕೆಲವು ಕರ್ಮಗಳ ಸವಿಯನ್ನುಣಿಸಲಿಕ್ಕಾಗಿಯೂ ಅವರು ಮರಳಲೂ ಬಹುದೆಂಬ ನಿರೀಕ್ಷೆಯಿಂದಲೂ (ಆಗಿದೆ).

ظَهَرَ الۡفَسَادُ فِى الۡبَرِّ وَالۡبَحۡرِ بِمَا
كَسَبَتۡ اَيۡدِى النَّاسِ لِيُذِيۡقَهُمۡ
بَعۡضَ الَّذِىۡ عَمِلُوۡا لَعَلَّهُمۡ يَرۡجِعُوۡنَ ٤١

42. ಸಂದೇಶವಾಹಕರೇ, ಭೂಮಿಯಲ್ಲಿ ಸಂಚರಿಸಿ, ಹಿಂದೆ ಗತಿಸಿ ಹೋದವರ ಅಂತಿಮ ಪರಿಣಾಮವೇನಾಗಿದೆ ಎಂಬುದನ್ನು ನೋಡಿರಿ ಎಂದು ಅವರೊಡನೆ ಹೇಳಿರಿ. ಅವರಲ್ಲಿ ಹೆಚ್ಚಿನವರು ಬಹುದೇವಾರಾಧಕರಾಗಿದ್ದರು.

قُلۡ سِيۡرُوۡا فِى الۡاَرۡضِ فَانْظُرُوۡا كَيۡفَ
كَانَ عَاقِبَةُ الَّذِيۡنَ مِنۡ قَبۡلُ‌ؕ
كَانَ اَكۡثَرُهُمۡ مُّشۡرِكِيۡنَ ٤٢

43. ಆದುದರಿಂದ ನಿವಾರಣೆಯಾಗುವ ಯಾವ ಸಾಧ್ಯತೆಯೂ ಅಲ್ಲಾಹನ ಕಡೆಯಿಂದ ಇಲ್ಲದಿರುವಂತಹ ಆ ದಿನವು ಬರುವುದಕ್ಕೆ ಮುಂಚಿತವಾಗಿ ನಿಮ್ಮ ಮುಖವನ್ನು ಈ ಸತ್ಯಧರ್ಮದ ಕಡೆಗೆ ಸ್ಥಿರವಾಗಿರಿಸಿಕೊಳ್ಳಿರಿ. ಅಂದು ಜನರು ಸಿಡಿದು ಪರಸ್ಪರ ಬೇರ್ಪಡುವರು.

فَاَقِمۡ وَجۡهَكَ لِلدِّيۡنِ الۡقَيِّمِ مِنۡ
قَبۡلِ اَنۡ يَّاۡتِىَ يَوۡمٌ لَّا مَرَدَّ لَهٗ
مِنَ اللّٰهِ يَوۡمَئِذٍ يَّصَّدَّعُوۡنَ ٤٣

44. ಯಾರು ಸತ್ಯವನ್ನು ನಿಷೇಧಿಸುವನೋ ಅವನ ನಿಷೇಧದ ಅಪರಾಧ ಅವನ ಮೇಲೆಯೇ ಇದೆ. ಸತ್ಕರ್ಮವೆಸಗಿದವರು ತಮಗಾಗಿಯೇ (ಯಶಸ್ಸಿನ ಮಾರ್ಗವನ್ನು) ಸುಗಮಗೊಳಿಸುತ್ತಿದ್ದಾರೆ.

مَنۡ كَفَرَ فَعَلَيۡهِ كُفۡرُهٗ‌ۚ وَمَنۡ عَمِلَ
صَالِحًا فَلِاَنۡفُسِهِمۡ يَمۡهَدُوۡنَ ٤٤

45. (ಇದು) ಸತ್ಯವಿಶ್ವಾಸ ಸ್ವೀಕಾರ ಮಾಡಿದವರಿಗೂ ಸತ್ಕರ್ಮವೆಸಗಿದವರಿಗೂ ಅಲ್ಲಾಹನು ತನ್ನ ಅನುಗ್ರಹದಿಂದ ಸತ್ಫಲ ನೀಡುವಂತಾಗಲು. ನಿಶ್ಚಯವಾಗಿಯೂ ಅವನು ಸತ್ಯನಿಷೇಧಿಗಳನ್ನು ಮೆಚ್ಚುವುದಿಲ್ಲ.

لِيَجۡزِىَ الَّذِيۡنَ اٰمَنُوۡا وَعَمِلُوا الصّٰلِحٰتِ
مِنۡ فَضۡلِهٖ‌ؕ اِنَّهٗ لَا يُحِبُّ الۡكٰفِرِيۡنَ ٤٥

ಆಲಿ ಇಮ್ರಾನ್ ಅಧ್ಯಾಯದ 130 ಹಾಗೂ ಅಲ್ ಬಕರಃದ 275ರಿಂದ 281ರ ವರೆಗಿನ ಸೂಕ್ತಗಳನ್ನು ನೋಡಿರಿ.

11. ಇದು ಆ ಕಾಲದಲ್ಲಿ ಜಗತ್ತಿನ ಮಹಾ ಶಕ್ತಿಗಳಾಗಿದ್ದ ರೋಮ್ ಮತ್ತು ಇರಾನಿನ ನಡುವೆ ನಡೆದ ಯುದ್ಧದ ಕಡೆಗಿರುವ ಸೂಚನೆ.

46. ಸುವಾರ್ತೆ ನೀಡಲು, ನಿಮಗೆ ತನ್ನ ಕೃಪೆಯನ್ನು ಒದಗಿಸಲು, ನಾವೆಗಳು ಅವನ ಆಜ್ಞೆಯಿಂದ ಚಲಿಸುತ್ತಿರಲು, ನೀವು ಅವನ ಅನುಗ್ರಹವನ್ನು ಅರಸಲು ಮತ್ತು ಅವನಿಗೆ ಕೃತಜ್ಞರಾಗಿರಲು ಅವನು ಮಾರುತಗಳನ್ನು ಕಳುಹಿಸುವುದು ಅವನ ನಿದರ್ಶನಗಳಲ್ಲಾಗಿದೆ.

وَمِنْ اٰيٰتِهٖٓ اَنْ يُّرْسِلَ الرِّيٰحَ مُبَشِّرٰتٍ وَّلِيُذِيْقَكُمْ مِّنْ رَّحْمَتِهٖ وَلِتَجْرِيَ الْفُلْكُ بِاَمْرِهٖ وَلِتَبْتَغُوْا مِنْ فَضْلِهٖ وَلَعَلَّكُمْ تَشْكُرُوْنَ ۝٤٦

47. ನಾವು ನಿಮಗಿಂತ ಮುಂಚೆ ಸಂದೇಶವಾಹಕರನ್ನು ಅವರ ಜನಾಂಗದ ಕಡೆಗೆ ರವಾನಿಸಿದೆವು ಮತ್ತು ಅವರು ಅವರ ಮುಂದೆ ಸುವ್ಯಕ್ತ ನಿದರ್ಶನಗಳನ್ನು ತಂದರು. ತರುವಾಯ ಅಪರಾಧವೆಸಗಿದವರ ವಿರುದ್ಧ ನಾವು ಪ್ರತೀಕಾರ ತೀರಿಸಿದೆವು. ಸತ್ಯವಿಶ್ವಾಸಿಗಳಿಗೆ ಸಹಾಯ ಮಾಡುವುದು ನಮ್ಮ ಹೊಣೆಯಾಗಿತ್ತು.

وَلَقَدْ اَرْسَلْنَا مِنْ قَبْلِكَ رُسُلًا اِلٰى قَوْمِهِمْ فَجَاۤءُوْهُمْ بِالْبَيِّنٰتِ فَانْتَقَمْنَا مِنَ الَّذِيْنَ اَجْرَمُوْا ۗ وَكَانَ حَقًّا عَلَيْنَا نَصْرُ الْمُؤْمِنِيْنَ ۝٤٧

48. ಮಾರುತಗಳನ್ನು ಕಳುಹಿಸುವವನು ಅಲ್ಲಾಹನೇ ಆಗಿರುತ್ತಾನೆ. ಅವು ಮೋಡಗಳನ್ನು ಎತ್ತುತ್ತವೆ. ಅನಂತರ ಅವನು ತಾನಿಚ್ಛಿಸುವಂತೆ ಮೋಡಗಳನ್ನು ಆಕಾಶದಲ್ಲಿ ಹರಡುತ್ತಾನೆ. ಅವುಗಳನ್ನು ವಿಭಾಗಗಳಾಗಿ ಹಂಚುತ್ತಾನೆ. ಆ ಬಳಿಕ ಮಳೆ ಹನಿಗಳು ಮೋಡದಿಂದ ತೊಟ್ಟಿಕ್ಕುತ್ತ ಸಾಗುವುದನ್ನು ತಾವು ನೋಡುತ್ತೀರಿ. ಈ ಮಳೆಯನ್ನು ಅವನು ತನ್ನ ದಾಸರಲ್ಲಿ ತನಗಿಷ್ಟ ಬಂದವರ ಮೇಲೆ ಸುರಿಸಿದಾಗ ಅವರು ಒಮ್ಮೆಲೇ ಆನಂದ ತುಂದಿಲರಾಗುತ್ತಾರೆ.

اَللّٰهُ الَّذِيْ يُرْسِلُ الرِّيٰحَ فَتُثِيْرُ سَحَابًا فَيَبْسُطُهٗ فِى السَّمَاۤءِ كَيْفَ يَشَاۤءُ وَيَجْعَلُهٗ كِسَفًا فَتَرَى الْوَدْقَ يَخْرُجُ مِنْ خِلٰلِهٖ ۚ فَاِذَآ اَصَابَ بِهٖ مَنْ يَّشَاۤءُ مِنْ عِبَادِهٖٓ اِذَا هُمْ يَسْتَبْشِرُوْنَ ۚ ۝٤٨

49. ವಸ್ತುತಃ ಅದರ ಅವತರಣಕ್ಕಿಂತ ಮುಂಚೆ ಅವರು ನಿರಾಶರಾಗತೊಡಗಿದ್ದರು.

وَاِنْ كَانُوْا مِنْ قَبْلِ اَنْ يُّنَزَّلَ عَلَيْهِمْ مِّنْ قَبْلِهٖ لَمُبْلِسِيْنَ ۝٤٩

50. ಅಲ್ಲಾಹನ ಕೃಪೆಯ ಪರಿಣಾಮವನ್ನು ನೋಡಿರಿ. ಸತ್ತು ಬಿದ್ದಿದ್ದ ನೆಲವನ್ನು ಅವನು ಹೇಗೆ ಜೀವಂತಗೊಳಿಸಿ ಎಬ್ಬಿಸುತ್ತಾನೆ. ನಿಶ್ಚಯವಾಗಿಯೂ ಅವನು ಮೃತರನ್ನು ಜೀವಂತ ಗೊಳಿಸುವವನು ಮತ್ತು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು.

فَانْظُرْ اِلٰٓى اٰثٰرِ رَحْمَتِ اللّٰهِ كَيْفَ يُحْيِ الْاَرْضَ بَعْدَ مَوْتِهَا ۗ اِنَّ ذٰلِكَ لَمُحْيِ الْمَوْتٰى ۚ وَهُوَ عَلٰى كُلِّ شَيْءٍ قَدِيْرٌ ۝٥٠

51. ಅವರು ತಮ್ಮ ಹೊಲಗಳನ್ನು ಹಳದಿಯಾಗಿ ಕಾಣುವಂತಹ ಒಂದು ಗಾಳಿಯನ್ನು ನಾವು ಕಳುಹಿಸಿಬಿಟ್ಟರೆ ಆಗ ಅವರು ಸತ್ಯನಿಷೇಧಿಗಳಾಗಿ ಬಿಡುತ್ತಾರೆ.[12]

وَلَىِٕنْ اَرْسَلْنَا رِيْحًا فَرَاَوْهُ مُصْفَرًّا لَّظَلُّوْا مِنْۢ بَعْدِهٖ يَكْفُرُوْنَ ۝٥١

12. ಅರ್ಥಾತ್- ಆಗ ಅವರು ದೇವನನ್ನು ಹಳಿಯ ತೊಡಗುತ್ತಾರೆ. ಅವನು ನಮ್ಮ ಮೇಲೆ ಎಂತಹ ಕಷ್ಟ ಕಾರ್ಪಣ್ಯಗಳನ್ನು ಹೇರಿದ್ದಾನೆ ಎಂದು ಪ್ರಲಾಪಿಸತೊಡಗುತ್ತಾರೆ. ವಾಸ್ತವದಲ್ಲಿ ದೇವನು ಅವರ ಮೇಲೆ ಅನುಗ್ರಹದ ಮಳೆಗರೆದಿದ್ದಾಗ ಅವರು ಕೃತಜ್ಞರಾಗುವ ಬದಲು ಅವನಿಗೆ ಕೃತಘ್ನತೆ ತೋರಿದ್ದರು.

52. (ಪೈಗಂಬರರೇ) ನೀವು ಮೃತರಿಗೆ ಕೇಳಿಸಲಾರಿರಿ,[13] ಬೆನ್ನು ತಿರುಗಿಸಿ ನಡೆಯುತ್ತಿರುವ ಕಿವುಡರಿಗೂ ನೀವು ಕೇಳಿಸಲಾರಿರಿ.

فَإِنَّكَ لَا تُسْمِعُ الْمَوْتَىٰ وَلَا تُسْمِعُ الصُّمَّ الدُّعَاءَ إِذَا وَلَّوْا مُدْبِرِينَ ﴿٥٢﴾

53. ಮತ್ತು ನೀವು ಕುರುಡರನ್ನು ಅವರ ಪಥಭ್ರಷ್ಟತೆಯಿಂದ ಮುಕ್ತಗೊಳಿಸಿ ಅವರಿಗೆ ಸನ್ಮಾರ್ಗದರ್ಶನ ಮಾಡಲಾರಿರಿ. ನೀವು ನಮ್ಮ ಸೂಕ್ತಗಳ ಮೇಲೆ ವಿಶ್ವಾಸವಿರಿಸುವ ಹಾಗೂ ವಿಧೇಯರಾಗುವವರಿಗೆ ಮಾತ್ರ ಕೇಳಿಸಬಲ್ಲಿರಿ.

وَمَا أَنْتَ بِهَادِ الْعُمْيِ عَنْ ضَلَالَتِهِمْ ۖ إِنْ تُسْمِعُ إِلَّا مَنْ يُؤْمِنُ بِآيَاتِنَا فَهُمْ مُسْلِمُونَ ﴿٥٣﴾

54. ದುರ್ಬಲಾವಸ್ಥೆಯಿಂದ ನಿಮ್ಮ ಜನನದ ಆರಂಭವನ್ನು ಮಾಡಿದವನು ಅಲ್ಲಾಹನೇ ತಾನೆ. ಈ ದುರ್ಬಲಾವಸ್ಥೆಯ ತರುವಾಯ ಅವನು ನಿಮಗೆ ಶಕ್ತಿ ಪ್ರದಾನ ಮಾಡಿದನು. ಈ ಶಕ್ತಿಯ ನಂತರ ನಿಮ್ಮನ್ನು ಅಶಕ್ತ ಹಾಗೂ ವೃದ್ಧರನ್ನಾಗಿ ಮಾಡಿದನು. ಅವನು ತಾನಿಚ್ಛಿಸಿದುದನ್ನು ಸೃಷ್ಟಿಸುತ್ತಾನೆ ಮತ್ತು ಅವನು ಸರ್ವಜ್ಞನೂ ಸರ್ವ ಸಮರ್ಥನೂ ಆಗಿರುತ್ತಾನೆ.

اللَّهُ الَّذِي خَلَقَكُمْ مِنْ ضَعْفٍ ثُمَّ جَعَلَ مِنْ بَعْدِ ضَعْفٍ قُوَّةً ثُمَّ جَعَلَ مِنْ بَعْدِ قُوَّةٍ ضَعْفًا وَشَيْبَةً ۚ يَخْلُقُ مَا يَشَاءُ ۖ وَهُوَ الْعَلِيمُ الْقَدِيرُ ﴿٥٤﴾

55. ಆ ಘಳಿಗೆ ಬಂದಾಗ[14] ಅಪರಾಧಿಗಳು ನಾವು ಒಂದು ಘಳಿಗೆಗಿಂತ ಹೆಚ್ಚು ಕಾಲ ತಂಗಿರಲಿಲ್ಲವೆಂದು ಆಣೆ ಹಾಕುತ್ತ ಹೇಳುವರು. ಅವರು ಲೌಕಿಕ ಜೀವನದಲ್ಲಿ ಹೀಗೆಯೇ ಮೋಸ ಹೋಗುತ್ತಿದ್ದರು.

وَيَوْمَ تَقُومُ السَّاعَةُ يُقْسِمُ الْمُجْرِمُونَ مَا لَبِثُوا غَيْرَ سَاعَةٍ ۚ كَذَٰلِكَ كَانُوا يُؤْفَكُونَ ﴿٥٥﴾

56. ಆದರೆ ಜ್ಞಾನ ಹಾಗೂ ಸತ್ಯವಿಶ್ವಾಸವನ್ನು ಹೊಂದಿದವರು, "ದೇವ ದಾಖಲೆಯ ಪ್ರಕಾರ ನೀವು ಪುನರುತ್ಥಾನ ದಿನದ ವರೆಗೂ ಬಿದ್ದುಕೊಂಡಿದ್ದಿರಿ. ಇದು ಅದೇ ಪುನರುತ್ಥಾನ ದಿನ. ಆದರೆ ನೀವು ತಿಳಿದಿರಲಿಲ್ಲ" ಎಂದು ಹೇಳುವರು.

وَقَالَ الَّذِينَ أُوتُوا الْعِلْمَ وَالْإِيمَانَ لَقَدْ لَبِثْتُمْ فِي كِتَابِ اللَّهِ إِلَىٰ يَوْمِ الْبَعْثِ ۖ فَهَٰذَا يَوْمُ الْبَعْثِ وَلَٰكِنَّكُمْ كُنْتُمْ لَا تَعْلَمُونَ ﴿٥٦﴾

57. ಅಂತೂ ಅದು ಅಕ್ರಮಿಗಳಿಗೆ ಅವರ ನೆಪವೇನೂ ಫಲ ಕೊಡದ ದಿನವಾಗಿರುವುದು ಮತ್ತು ಅವರೊಡನೆ ಕ್ಷಮಾಯಾಚನೆ ಮಾಡಲಿಕ್ಕೂ ಹೇಳಲಾಗದು.[15]

فَيَوْمَئِذٍ لَا يَنْفَعُ الَّذِينَ ظَلَمُوا مَعْذِرَتُهُمْ وَلَا هُمْ يُسْتَعْتَبُونَ ﴿٥٧﴾

13. ಅರ್ಥಾತ್- ಆತ್ಮಸಾಕ್ಷಿ ಮತ್ತು ಸತ್ತುಹೋದವರಿಗೆ.

14. ಅರ್ಥಾತ್- ನಿರ್ಣಾಯಕ ದಿನ. ಅದು ಬರಲಿದೆ ಎಂದು ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

15. ಇನ್ನೊಂದು ಭಾಷಾಂತರ ಹೀಗಾಗಬಹುದು, "ತಮ್ಮ ಪ್ರಭುವನ್ನು ಸಂತುಷ್ಟಗೊಳಿಸಬೇಕೆಂದು ಅವರಿಂದ ಬಯಸಲಾಗುವುದಿಲ್ಲ."

58. ನಾವು ಈ ಕುರ್‌ಆನಿನಲ್ಲಿ ಜನರಿಗೆ ನಾನಾ ವಿಧವಾಗಿ ಬೋಧಿಸಿದ್ದೇವೆ. ನೀವು ಎಂತಹ ನಿದರ್ಶನಗಳನ್ನೇ ತಂದರೂ ಸತ್ಯ ನಿಷೇಧಿಗಳು ನೀವು ಮಿಥ್ಯದಲ್ಲಿ ಇರುವಿರೆಂದೇ ಹೇಳುವರು.

وَلَقَدْ ضَرَبْنَا لِلنَّاسِ فِي هَٰذَا الْقُرْآنِ
مِن كُلِّ مَثَلٍ ۚ وَلَئِن جِئْتَهُم بِآيَةٍ
لَّيَقُولَنَّ الَّذِينَ كَفَرُوا إِنْ أَنتُمْ
إِلَّا مُبْطِلُونَ ٥٨

59. ಹೀಗೆ ಅಲ್ಲಾಹನು ಅಜ್ಞಾನಿಗಳ ಹೃದಯಗಳಿಗೆ ಮುದ್ರೆಯೊತ್ತಿ ಬಿಡುತ್ತಾನೆ.

كَذَٰلِكَ يَطْبَعُ اللَّهُ عَلَىٰ قُلُوبِ الَّذِينَ
لَا يَعْلَمُونَ ٥٩

60. ಆದುದರಿಂದ (ಪೈಗಂಬರರೇ) ತಾಳ್ಮೆ ವಹಿಸಿರಿ. ಖಂಡಿತವಾಗಿಯೂ ಅಲ್ಲಾಹನ ವಾಗ್ದಾನ ಸತ್ಯವಾದುದು. ನಂಬಿಕೆ ಇರಿಸದ ಜನರು ಎಷ್ಟು ಮಾತ್ರಕ್ಕೂ ನಿಮ್ಮನ್ನು ಲಘುವಾಗಿ ಕಾಣದಿರಲಿ.[16]

فَاصْبِرْ إِنَّ وَعْدَ اللَّهِ حَقٌّ ۖ وَلَا يَسْتَخِفَّنَّكَ
الَّذِينَ لَا يُوقِنُونَ ٦٠ ع

---

16. ಅರ್ಥಾತ್- ಶತ್ರುಗಳ ದೃಷ್ಟಿಯಲ್ಲಿ ನೀವು ದುರ್ಬಲವಾಗಿ ಉಳಿಯಲಾರಿರಿ. ಅವರ ಸದ್ದುಗದ್ದಲದಿಂದಲೇ ನಿಮ್ಮ ಸದ್ದಡಗಿ ಹೋಗುತ್ತದೆ, ಅವರ ಸತತ ಆರೋಪಗಳಿಂದ ನೀವು ಅಂಜಿ ಸುಮ್ಮನಾಗುತ್ತೀರಿ, ಅವರ ಬೆದರಿಕೆ ಮತ್ತು ಅಪಹಾಸ್ಯಗಳಿಂದ ನಿಮ್ಮ ಶಕ್ತಿ ಉಡುಗಿ ಹೋಗುತ್ತದೆ, ಅವರ ಎಚ್ಚರಿಕೆ, ಶಕ್ತಿಪ್ರದರ್ಶನ ಮತ್ತು ಅಕ್ರಮ-ಅನ್ಯಾಯಗಳಿಂದ ನೀವು ಭಯಗ್ರಸ್ತರಾಗುವಿರಿ ಅಥವಾ ಅವರ ಆಸೆ ಆಮಿಷಗಳ ಪ್ರವಾಹದಲ್ಲಿ ನೀವು ಕೊಚ್ಚಿ ಹೋಗುತ್ತೀರಿ ಎಂದು ಶತ್ರುಗಳು ನಿಮ್ಮ ಬಗ್ಗೆ ಭಾವಿಸಲಾರರು.